ಅಸಲು ದಾವಾ ನಂಃ **84/2022**
ಡಿ.ಡಬ್ಲ್ಯೂಃ **01**

**<u>ದಿನಾಂಕಃ08-02-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು: ಶ್ರೀ ಟಿ.ಟಿ., ಪ್ರತಿವಾದಿ ಪರ ವಕೀಲರಿಂದ</u>

2. ನನಗೆ ಓದಲು ಮತ್ತು ಬರೆಯಲು ಅಷ್ಟು ಚೆನ್ನಾಗಿ ಬರುವುದಿಲ್ಲ. ವಾದಿ ಶಿವಮೂರ್ತಿ ನನಗೆ ಚಿಕ್ಕ ವಯಸ್ಸಿನಿಂದ ಪರಿಚಯಸ್ಥ ಎಂದರೆ ಸರಿಯಲ್ಲ. ಸಾಕ್ಷಿಯು ವಾದಿಗೆ ಜಮೀನನ್ನು ಕೋರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಪುರ್ಲೆಹಳ್ಳಿ ಹಾಗೂ ಸೂರನಹಳ್ಳಿ ಗ್ರಾಮಗಳ ನಡುವೆ 3 ಕೀ.ಮಿ ಅಂತರ ಇರುತ್ತದೆ ಎಂದರೆ ಸರಿ. ನಮ್ಮ ಊರಾದ ಸೂರನ ಹಳ್ಳಿಗೆ ಸರ್ಕಾರಿ ಮತ್ತು ಖಾಸಗಿ ಬಸ್ ಗಳ ವ್ಯವಸ್ಥೆ ಇಲ್ಲದಿರುವ ಕಾರಣಕ್ಕೆ ಪುರ್ಲೆಹಳ್ಳಿ ಗ್ರಾಮದಲ್ಲಿ ಬಸ್ ಇಳಿದುಕೊಂಡು ಹೋಗಬೇಕಾಗುತ್ತದೆ ಎಂದರೆ ಸರಿ. ಪುರ್ಲೆಹಳ್ಳಿ ಬಸ್ ನಿಲ್ದಾಣದ ಬಳಿಯೇ ವಾದಿ ಶಿವಮೂರ್ತಿಯ ಮನೆ ಇರುತ್ತದೆ ಎಂದರೆ ಸರಿ. ಪುರ್ಲೆಹಳ್ಳಿ ಗ್ರಾಮದಿಂದ ಸೂರನಹಳ್ಳಿ ಗ್ರಾಮಕ್ಕೆ ಹೋಗುವ ಮಧ್ಯ ದಾರಿಯಲ್ಲಿ ನನಗೆ ಸೇರಿದ ಜಮೀನು ಬರುತ್ತದೆ ಎಂದರೆ ಸರಿ. ನಮ್ಮ ಊರಿನಿಂದ ಚಳ್ಳಕೆರೆಗೆ ಬೈಕ್ ಮೂಲಕ ಬರಬೇಕಾದರೆ ಪುರ್ಲೆಹಳ್ಳಿ ಮೇಲಿಂದಲೇ ಹೋಗಬೇಕಾಗುತ್ತದೆ ಎಂದರೆ ಸರಿ. ವಾದಿ ಶಿವಮೂರ್ತಿ ಕುಟುಟಂಬದ ಕುರಿತು ನನಗೆ ಪರಿಚಯ ಇರುತ್ತದೆ ಎಂದರೆ ಸರಿ.

3.ಸರ್ವೇ ನಂಬರ್ 56/2 ರ ಜಮೀನಿನಲ್ಲಿ 4 ಬೋರ್ವೆಲ್ ಗಳು ಇರುತ್ತವೆ. ಸದರಿ ಬೋರ್ ವೆಲ್ಗಳು ನನ್ನ ತಂದೆ ಕೋರೆಸಿದ್ದರು. ನಾನು 4 ಬೋರ್ವೆಲ್ಗಳನ್ನು ಹಾಲಿ ಬಳಸುತ್ತಿದ್ದೇನೆ. ನನ್ನ ಜಮಿನಿನ ಪಕ್ಕದಲ್ಲಿಯೇ ವೇದಾವತಿ ನದಿ ಕಟ್ಟೆ ಯಿಂದ ಹರಿದು ಹೋಗುತ್ತದೆ ಎಂದರೆ ಸರಿ. ಸುಮಾರು 4-5 ವರ್ಷಗಳಿಂದ ಕಟ್ಟೆಯಿಂದ ನೀರು ಹರಿಯುತ್ತಿಲ್ಲ ಎಂದರೆ ಸರಿ. ನೀರು ಇಲ್ಲದಿರುವ ಸಮಯದಲ್ಲಿ ಕೇಲವರು ಪರವಾನಿಗೆ ಪಡೆದುಕೊಂಡು ಮರಳನ್ನು ಸಾಗಿಸುತ್ತಿದ್ದರು ಎಂದರೆ ಸರಿಯಲ್ಲ. 2008 ನೇ ಇಸವಿಯಲ್ಲಿ ನಾನು ಟ್ರಾಕ್ಟರ್ ಖರೀದಿಸಲು 5,97,000 ರೂಪಾಯಿ ಮೈಸೂರು ಬ್ಯಾಂಕ್ ನಲ್ಲಿ ಸಾಲ ಪಡೆದಿದ್ದೆ ಎಂದರೆ ಸರಿ. ಸದರಿ ಟ್ರಾಕ್ಟರ್ ಅನ್ನು ನಾನು ಮರಳು ಸಾಗಿಸಲು ಖರೀದಿಸಿದ್ದೆ ಎಂದರೆ ಸರಿಯಲ್ಲ. 2008 ನೇ ಇಸವಿಯಲ್ಲಿ ಒಂದೂವರೆ ಎಕರೆಯಲ್ಲಿ ನಾನು ಅಡಿಕೆ ಸಸಿ ನೆಟ್ಟಿದೇನೆ.

4. 2013 ರಲ್ಲಿ ವಾದಿ ಶಿವಮೂರ್ತಿ ನನ್ನ ಜಮೀನನ್ನು ಕೋರಿಗೆ ಮಾಡಲು ಬಂದಿರುತ್ತಾನೆ. ವಾದಿ ಶಿವಮೂರ್ತಿ ಮತ್ತು ಅವರ ಅಣ್ಣನಿಗೆ ಸೇರಿದ ಬಹಳಷ್ಟು ಕುರಿಗಳು ಇದ್ದವು ಎಂದರೆ ಸರಿಯಲ್ಲ. ವಾದಿ ಶಿವಮೂರ್ತಿ ಮತ್ತು ಅವರ ಅಣ್ಣ ವಿಭಾಗ ಆದಾಗ, ವಾದಿ ಶಿವಮೂರ್ತಿ ಭಾಗಕ್ಕೆ ಬಂದ ಕುರಿಗಳನ್ನು ಮೇಯಿಸಲು ನನ್ನ ಜಮೀನಿನಲ್ಲಿ ಸಗಸೇ ಗಿಡಗಳನ್ನು ನೆಟ್ಟಿದ್ದರು ಎಂದರೆ

ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ನೆಟ್ಟಿದ್ದೆ, ಅವರು ಮೇಯಿಸಲು ಬರುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಈಗ ಹಾಕಿರುವ ಅಡಿಕೆ ಗಿಡಗಳಿರುವ ಜಾಗದಲ್ಲಿ ವಾದಿ ಶಿವಮೂರ್ತಿ ಸಗಸೇ ಗಿಡಗಳನ್ನು ನೆಟ್ಟಿದ್ದರು ಎಂದರೆ ಸರಿಯಲ್ಲ. ವಾದಿ ಶಿವಮೂರ್ತಿ ಹಾಗೂ ನಾನು ಜಂಟಿಯಾಗಿ ನನ್ನ ಜಮೀನಿನಲ್ಲಿ ವ್ಯವಸಾಯ ಮಾಡಿ ಬಂದ ಖರ್ಚನ್ನು ಕಳೆದು ಹಂಚಿಕೊಂಳ್ಳುತ್ತಿದೇವು ಎಂದರೆ ಸಾಕ್ಷಿಯು ನಾನು ಟ್ರಾಕ್ಟರ್ ಮೂಲಕ ಕೆಲಸ ಮಾಡಿಕೊಡುತ್ತಿದ್ದೆ, ಅವರು ಉಪ್ಪು ಬೀಜ, ತರುತ್ತಿದ್ದರು ಆದಾಯವನ್ನು ಹಂಚಿಕೊಳ್ಳುತ್ತಿದ್ದೇವು ಎಂದು ನುಡಿಯುತ್ತಾರೆ. 2013 ರಿಂದ ಮೇ 2019 ನೇ ಇಸವಿಯವರೆಗೆ ಜಂಟಿಯಾಗಿ ವ್ಯವಸಾಯ ಮಾಡಿರುತ್ತೇವೆ.

5. ನನ್ನ ಜಮೀನಿನಲ್ಲಿ ಒಂದು ಸೀಟಿನ ಮನೆ ಇತ್ತು. ಹಾಲಿ ಈಗ ಹೊಸದಾಗಿ ಮನೆ ಕಟ್ಟಿಸುತ್ತಿದ್ದೇನೆ. ನಾವು ಇಬ್ಬರು ಜೊತೆಯಲ್ಲಿ ಸಾಗುವಳಿ ಮಾಡುತ್ತಿದ್ದಾಗ ಈರುಳ್ಳಿ ಮತ್ತು ರಾಗಿ, ಬೆಳೆಯುತ್ತಿದ್ದೇವು. ಒಬ್ಬೊಬ್ಬರಿಗೆ ಖರ್ಚ ಎಲ್ಲಾ ಕಳೆದು ಸರಿ ಸುಮಾರು 70 ಸಾವಿರು ರೂಪಾಯಿ ಆದಾಯ ಬರುತ್ತಿತ್ತು. ವಾದಿ ಶಿವಮೂರ್ತಿ ಖರ್ಚು ಮತ್ತು ಆಧಾಯದ ಕುರಿತು ನನಗೆ ಪಟ್ಟಿ ಕೊಡುತ್ತಿದ್ದರು ಎಂದರೆ ಸರಿ.

6. ನನ್ನ ಜಮೀನನ್ನು ಅಭಿವೃದ್ಧಿ ಪಡಿಸಲು ಮತ್ತು ಮನೆ ಕಟ್ಟಿಸುವ ಸಲುವಾಗಿ 2019 ರಲ್ಲಿ ವಾದಿ ಶಿವಮೂರ್ತಿ ಯಿಂದ 4,60,000 ರೂಪಾಯಿ ಸಾಲ ಪಡೆದಿದ್ದೆ ಎಂದರೆ ಸಾಕ್ಷಿಯು ಸಾಧ್ಯವೇ ಇಲ್ಲ ಎಂದು ನುಡಿಯುತ್ತಾರೆ. ಈ ಕುರಿತು ನಾನು ದಿನಾಂಕಃ 14-07-2019 ರಂದು ಪ್ರಾಂಸರಿ ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರಾಂಸರಿ ಪತ್ರದಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸರಿಯಲ್ಲ. ನಿಡಿ-7 ರ ಪತ್ರದಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸಾಕ್ಷಿಯು ಅದನ್ನು ನೋಡಿ ಹೌದು ಎಂದು ನುಡಿದಿರುತ್ತಾರೆ. ಅದೇ ರೀತಿ ನಿಡಿ-10 ರ ಪತ್ರದಲ್ಲಿಯೂ ಸಹ ನನ್ನ ಸಹಿ ಇರುತ್ತದೆ ಎಂದರೆ ಸಾಕ್ಷಿಯು ಅದನ್ನು ನೋಡಿ ಹೌದು ಎಂದು ನುಡಿದಿರುತ್ತಾರೆ. ನಿಡಿ-7 ಮತ್ತು 10 ರಲ್ಲಿರುವ ನನ್ನ ಸಹಿಗಳು ಸ್ವಲ್ಪ ವ್ಯತ್ಯಾಸ ಇರುತ್ತವೆ ಎಂದರೆ ಸರಿ.

7. ಜಿ.ಎಲ್.ಪ್ರಸನ್ನ ಕುಮಾರ ಮತ್ತು ತಿಪ್ಪೇಸ್ವಾಮಿ ಅವರನ್ನು ನಾನು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ಬಂದಾಗ ಹೊರತುಪಡಿಸಿ ಬೇರೆ ಎಲ್ಲಿಯೂ ನೋಡಿರಲಿಲ್ಲ. ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ವಾದಿ ಶಿವಮೂರ್ತಿ ಬಂದು ಹಣ ಕೇಳಿರುತ್ತಾನೆ ಎಂದರೆ ಸರಿಯಲ್ಲ. ದಿನಾಂಕಃ 10-03-2022 ರಂದು ನನಗೆ ಕಾನೂನು ಬದ್ದ ನೋಟಿಸ್ ತಲುಪಿರುತ್ತದೆ ಎಂದರೆ ಸರಿ. ಸದರಿ ನೊಟಿಸ್ ಗೆ ನಾನು ಪ್ರತ್ಯುತ್ತರ ನೀಡಿರುತ್ತೇನೆ. ನಾನು ಮತ್ತು ವಾದಿ ಶಿವಮೂರ್ತಿ ಝಡ್‌ಪಿ ಶ್ರೀನಿವಾಸ ಇವರ ಮನೆಯಲ್ಲಿ ಪಂಚಾಯತಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ವಾದಿಗೆ ಪ್ರತ್ಯುತ್ತರವನ್ನು ಕಳುಹಿಸಿರುತ್ತೇನೆ ಅಂತ ತೋರಿಸಲು ಅಂಚೆ ರಸೀದಿಯನ್ನು ಹಾಜರು

ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಪ್ರತ್ಯುತ್ತರವನ್ನು ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ.

8. ನಾನು ವಾದಿ ಶಿವಮೂರ್ತಿ ಯಿಂದ 4,60,000 ಸಾವಿರ ಸಾಲ ತೆಗೆದುಕೊಂಡಿರುವುದನ್ನು ತಿಳುವಳಿ ಮಾಡಲು ಪ್ರಾಂಸರಿ ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ಇರುವ ಅಡಿಕೆ ಸಸಿಗಳನ್ನು ವಾದಿ ಶಿವಮೂರ್ತಿ ಹಾಕಿಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಶಿವಮೂರ್ತಿ ಇಷ್ಟೇ ವರ್ಷಗಳ ಸಲುವಾಗಿ ಜಂಟಿಯಾಗಿ ವ್ಯವಸಾಯ ಮಾಡುತ್ತೆವೆ ಎಂದು ಕರಾರು ಮಾಡಿಕೊಂಡಿರಲಿಲ್ಲ ಎಂದರೆ ಸರಿ. ನಾನು ವಾದಿಯನ್ನು ಮಗನಂತೆ ಕಾಣುತ್ತಿದ್ದೆ ಎಂದರೆ ಸರಿಯಲ್ಲ. ಪಂಚಾಯತಿ ಮಾಡಿದಾಗ ಹಣ ಕೊಡುತೆತೇನೆಂದು ಹೇಳಿ ಈಗ ಸಾಲ ತೆಗೆದುಕೊಂಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಡಿಕೆ ಗಿಡಗಳ ಪಸಲು ಬರಲು ಪ್ರಾರಂಬಿಸಿದಾಗ ವಾದಿ ಶಿವಮೂರ್ತಿ ಆಧಾಯದಲ್ಲಿ ಭಾಗ ಕೇಳುತ್ತಾನೆಂದು ತಿಳಿದುಕೊಂಡು ಜಂಟಿಯಾಗಿ ವ್ಯವಸಾಯ ಮಾಡುತ್ತಿದ್ದುದನ್ನು ನಾನು ಬಿಡಿಸಿರುತ್ತೇನೆ ಎಂದರೆ ಸರಿಯಲ್ಲ.

9. ಪ್ರಾಂಸರಿ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ಪ್ರಸನ್ನ ಕುಮಾರ ಮತ್ತು ತಿಪ್ಪೇಸ್ವಾಮಿ ನನಗೆ ಪರಿಚಯಸ್ಥರು ಎಂದರೆ ಸರಿಯಲ್ಲ. ಅವರ ಸಮುಖದಲ್ಲಿಯೇ ನಾನು 4,60,000 ರೂಪಾಯಿ ಸಾಲ ಪಡೆದು ಕೊಂಡಿದ್ದೆ ಎಂದರೆ ಸರಿಯಲ್ಲ . ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಲಾನ್ನು ವಕೀಲರ ಕೋರಿಕೆಯ ಮೇರೆಗೆ ನೀಡಿ ಮುಂದೂಡಲಾಯಿತು.)**

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.